**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ ಕೊಪ್ಪಳ**

ಸಿ.ಸಿ.ನಂಃ 1348 /2022 ಚಾಸಾಃ( 6 ) ಪ್ರಾಸಾ (4 )

ದಿನಾಂಕಃ 23-03-2026 ರಂದು ಸಾಕ್ಷಿಗೆ ಪ್ರಮಾಣ ಭೋದಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಸಿದ್ದಲಿಂಗಪ್ಪ |
| ತಂದೆ ಹೆಸರು | ತಮ್ಮಣ್ಣಪ್ಪ ತಮ್ಮಣ್ಣವರ |
| ವಯಸ್ಸು | 62 ವರ್ಷ, |
| ಉದ್ಯೋಗ | ನಿವೃತ್ತ ಎ ಎಸ್ ಐ |
| ವಾಸಸ್ಥಳ | ಕೊಪ್ಪಳ |

**ಮುಖ್ಯ ವಿಚಾರಣೆಃ ಸಸಅ ರವರಿಂದ:**

ನಾನು 2020 ರಿಂದ 2024 ರವರೆಗೆ ಗ್ರಾಮೀಣ ಪೋಲೀಸ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ 18-2-2022 ರಂದು ಸಂಜೆ 5-30 ಗಂಟೆಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಒಂದು ದೂರು, ಪಂಚನಾಮೆ ಮತ್ತು ಆರೋಪಿಯನ್ನು ಹಾಜರುಪಡಿಸಿದ್ದು ಸದರಿ ದೂರಿನ ಸಾರಾಂಶದ ಮೇರೆಗೆ ಠಾಣಾ ಗುನ್ನೆ ನಂ. **41/2022** ರಂತೆ ಪ್ರಕರಣ ದಾಖಲಿಸಿ, ಪ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ನಮ್ಮ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ದಿನಾಂಕಃ 18-2-2022 ರಂದು ನಾನು ಆರೋಪಿಗೆ ಪೋಲೀಸ ಕಾಯ್ದೆ 41-ಎ ರಡಿಯಲಿ ನೀಡಿದ ನೋಟೀಸನ್ನು ನೀಡಿರುತ್ತೇನೆ. ನಂತರ ಚಾಸಾ-4 ಮತು 5 ರವರ ಹೇಳಿಕೆ ಪಡೆದಿರುತ್ತೇನೆ. ಈ ಪ್ರಕರಣದಲ್ಲಿ 2 ನೇ ಆರೋಪಿ ನಾಪತ್ತೆ ಆಗಿದ್ದು ಆ ವಿಷಯವಾಗಿ 2 ನೇ ಆರೋಪಿ ನಾಪತ್ತೆ ಎಂದು ದಿಃ 29-2-2022 ರಂದು ತನಿಖೆ ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿ ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ತಾನು ತಯಾರಿಸಿದ ಪ್ರ. ವ. ವರದಿಯನ್ನು ನೋಡಿ ಗುರುತಿಸಿದ್ದು, ಪ್ರ. ವ. ವವರದಿಯನ್ನು ನಿಪಿ-3 ಎಂದು, ಸಾಕ್ಷಿ ಸಹಿ ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿ ತಾನು ಸ್ವೀಕರಿಸಿದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿಪಿ-2 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿ ತಾನು ಸ್ವಿಕರಿಸಿದ ಮುದ್ದೆಮಾಲನ್ನು ನೋಡಿ ಗುರುತಿಸಿದ್ದು ಸದರಿ ಮುದ್ದೇಮಾಲುಗಳನ್ನು ಈಗಾಗಲೇ ಎಂ ಓ-1 ರಿಂದ 3 ಎಂದು ಗುರುತಿಸಲಾಗಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತಾರೆ. ಸಾಕ್ಷಿ ಆರೋಪಿಗೆ ಪೋಲೀ ಸ ಕಾಯ್ದೆ 41- ಎ ರಡಿಯಲಿ ನೀಡಿದ ನೋಟೀಸನ್ನು ನೋಡಿ ಗುರುತಿಸಿದ್ದು ಅದನ್ನು

ನಿಪಿ-4 ಎಂದು ಸಾಕ್ಷಿ ಸಹಿ ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಆರೋಪಿಯನ್ನು ನೋಡಿದರೆ ಗುರುತಿಸತ್ತೇನೆಂದು ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ</u>**

ದಾಳಿಗೆ ಹೋಗುವುದಕ್ಕೆ ನಾವು ನಮ್ಮ ಠಾಣಾ ಡೈರಿಯಲ್ಲಿ ನಮೂದು ಮಾಡುತೇವೆ ಎಂದರೆ ಸರಿ. ಸದರಿ ಡೈರಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಠಾಣೆಗೆ ಬಂದು ದೂರನ್ನು ಪಂಚನಾಮೇ ಮತ್ತು ಮುದ್ದೇವಲಾು ಹಾಗೂ ಆರೋೇನಯನ್ನು ಸಂಜೆ 5-50 ಕ್ಕೆ ಹಾಜರುಪಡಿಸಿರುತ್ತಾರೆ. ಈ ಪ್ರಕಣದಲ್ಲಿ್ಕ ನಾನು ಗುನ್ಹಾ ಸ್ಥಳಕ್ಕೆ ಹೋಗಿ ಪಂಚನಾಮೆ ಮಾಡಿಲ್ಲ. ನಾನು ಯಾವುದೇ ಕಾರಣಕ್ಕೂ ಗುನ್ಹಾ ಸ್ಥಳಕ್ಕೆ ಭೇಟಿ ನೀಡಿಲ್ಲೌ. ಕೊಪ್ಪಳದಿಂದ ಗುನ್ಹಾ ಸ್ಥಳ ಎಷ್ಟು ಕೀ ಮೀ ಅಂತರವಿದೆ ಎಂದು ಹೇಳಲು ಸಾದ್ಯವಿಲ್ಲ ಅಂದರೆ ಸರಿ ಈ ಪ್ರಕರಾಣದಲ್ಲಿ ಅಮಾನತ್ತು ಪಡಿಸಿಕೊಂಡ ಹಣದ ಮುಖಬೆಲೆ ಹೇಳಲು ಸಾದ್ಯವಿಲ್ಲ. ಪೆನ್ನಿನ ಕಂಪನಿ ಹೇಳಲು ಸಾದ್ಯವಿಲ್ಲ. ಯಾವುದೇ ಘಟನೆ ನಡೆದಿಲ್ಲ ಆಕಾರಣಕ್ಕಾಗಿ ನಾನು ಗುನ್ಹಾ ಸ್ಥಳಕ್ಕೆ ಭೇಟಿ ನೀಡಿಲ ಎಂದರೆ ಸರಿಯಲ್ಲ. ಚಾಸಾ-1 ರವರು ನಮ್ಮ ಮೆಲಾಧಿಕಾರಿಯಾದಗಿದ್ದು ಅವರ ಮಾತು ಕೇಳಿ ಅವರಿಗೆ ಅನಕೂಲವಾಗಲಿ ಎಂದು ಸುಳ್ಳು ಈ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಪಿಯಿಂದ ಯಾವುದೇ ಮುದ್ದೇಮಾಲನ್ನು ಜಪ್ತಿ ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಆರೋಪಿ ಪರಶುರಾಮ ಯಾರು ಎಂದು ನಾನು ಗುರುತಿಸಬಲ್ಲೆ ಎಂದು ಹೇಳಿದು ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಹಳದಿ ಬಣ್ಣದ ಶರ್ಟ ಧರಿಸಿದ ವ್ಯಕ್ತಿಯನ್ನು ನೋಡಿ ಗುರುತಿಸಿದ್ದು ಆರೋಪಿ ತನ್ನ ಹೆಸರು ಸಂತೊಷ ಬಾಂಡಿಗೆ ಎಂದು ಹೇಳಿರುತ್ತಾರೆ. ಈ ಪ್ರಕರಣದಲ್ಲಿ ನನಗೆ ವೈಯಕ್ತಿಕ ಮಾಹಿತಿ ಇಲ್ಲದಿದ್ದರೂ ಕೂಡಾ ಚಾಸಾ-1 ನನ್ನ ಮೇಲಾಧಿಕಾರಿಯಾದಗಿದ್ದು ಅವರ ಮಾತು ಕೇಳಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ ಹೇಳುತ್ತಿದ್ದೆನೆಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

1 ನೇ ಹೆ. ಜೆ ಎಂ ಎಫ್ ಸಿ ಕೊಪ್ಪಳ.